ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ:84/ನೇಮಕಾತಿ-2/2019-20

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ರವರ ಕಛೇರಿ
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ: 01.06.2020

ವಿಷಯ: ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹಾಗೂ ಸೇವಾನಿರತ (ನಾನ್ ಹೈದ್ರಬಾದ್ ಕರ್ನಾಟಕ) ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: 1. ಅಧಿಸೂಚನೆ ಸಂಖ್ಯೆ: 84/ನೇಮಕಾತಿ-2/2019-20, ದಿನಾಂಕ:18.07.2019.
2. ತಾತ್ಕಾಲಿಕ ಆಯ್ಕೆ ಪಟ್ಟಿಗಳ ದಿನಾಂಕ: 19.03.2020 & 20.03.2020.
3. ಶ್ರೀ ಮಾರುತಿ ಜಿ, ಶ್ರೀ ಹಾಲಪ್ಪ ಅರಸಿಕೆರಿ ಮತ್ತು ಶ್ರೀ ಝೂರಿಲಾಲ್ ನಾಯ್ಕ್ ರವರುಗಳು ಸಲ್ಲಿಸಿರುವ ಮುಚ್ಚಳಿಕೆ ಪ್ರಮಾಣ ಪತ್ರಗಳ ದಿನಾಂಕ: 21.03.2020 11.05.2020, ಮತ್ತು 12.05.2020.

# ತಾತ್ಕಾಲಿಕ ಆಯ್ಕೆ ಪಟ್ಟಿ

1. ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳಾ) ಹಾಗೂ ಸೇವಾನಿರತ, (ನಾನ್ ಹೈದ್ರಬಾದ್ ಕರ್ನಾಟಕ)-200 ಹುದ್ದೆಗಳ ನೇಮಕಾತಿಯನ್ನು ಉಲ್ಲೇಖಿತ-1ರ ಅಧಿಸೂಚನೆಯನ್ವಯ ಕೈಗೊಂಡು, ಸದರಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳು, 2009 & 2016ರಲ್ಲಿನ ನಿಯಮಗಳಂತೆ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಉಲ್ಲೇಖಿತ-2ರನ್ವಯ ಪ್ರಕಟಿಸಲಾಗಿರುತ್ತದೆ.

2. ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಹೆಚ್‌ಕೆ) ಮತ್ತು (ಎನ್‌ಹೆಚ್‌ಕೆ) ಹುದ್ದೆಗಳೆರಡಕ್ಕು ಆಯ್ಕೆಯಾಗಿರುವ ಮೂರು ಅಭ್ಯರ್ಥಿಗಳಾದ ಶ್ರೀ ಮಾರುತಿ ಜಿ – ನೊಂದಣೆ ಸಂಖ್ಯೆ:3700325, ಶ್ರೀ ಹಾಲಪ್ಪ ಅರಸಿಕೆರಿ – ನೊಂದಣೆ ಸಂಖ್ಯೆ:3700447 ಮತ್ತು ಶ್ರೀ ಝೂರಿಲಾಲ್ ನಾಯ್ಕ್ – ನೊಂದಣೆ ಸಂಖ್ಯೆ:3700640 ರವರುಗಳು ಉಲ್ಲೇಖಿತ-3ರನ್ವಯ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರಗಳಲ್ಲಿ ಆಯ್ಕೆಯಾಗಿರುವ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಎನ್‌ಹೆಚ್‌ಕೆ) ಹುದ್ದೆಗೆ ಸೇರ್ಪಡೆಯಾಗಲು ಇಚ್ಚೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅದರಂತೆ ಸದರಿಯವರುಗಳ ಮನವಿಗಳನ್ನು ಪರಿಗಣಿಸಿ ಆದೇಶ ಸಂಖ್ಯೆ: 81/ನೇಮಕಾತಿ-2/2019-20, ದಿನಾಂಕ: 28.05.2020 ರನ್ವಯ ಅವರುಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗಿರುತ್ತದೆ.

3. ಮೇಲ್ಕಂಡಂತೆ ಮೂರು ಅಭ್ಯರ್ಥಿಗಳ ಅಭ್ಯರ್ಥಿತನವನ್ನು ಆಯ್ಕೆಪಟ್ಟಿಯಿಂದ ರದ್ದುಗೊಳಿಸಿದ ಕಾರಣ ಉಂಟಾದ ಮೂರು ರಿಕ್ತ ಸ್ಥಾನಗಳಿಗೆ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹರಿರುವ ಮೂರು ಅಭ್ಯರ್ಥಿಗಳನ್ನು ಆಯ್ಕೆಮಾಡಿ ತಯಾರಿಸಲಾಗಿರುವ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ.

ಎ) ಈ ಆಯ್ಕೆ ಪಟ್ಟಿಯು ನಿಯಮಗಳನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯು ನಡೆಸುವ ವೈದ್ಯಕೀಯ ಪರೀಕ್ಷೆಯ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಇದ್ದ ಕಾರಣದಿಂದ ಸದರಿಯವರಿಗೆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಕಾನೂನಾತ್ಮಕ ಹಕ್ಕು ಇರುವುದಿಲ್ಲ. ಸದರಿ ನೇಮಕಾತಿಯು ಮೇಲ್ಕಂಡಂತೆ ಹೇಳಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸಿ) ಈ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಛ ನ್ಯಾಯಾಲಯ / ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

**B. PROVISIONAL SELECT LIST FOR THE POST OF SUB-INSPECTOR OF POLICE (CIVIL) (MEN) (MERITWISE)**

| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
|---|---|---|---|---|---|---|---|
| | | | | P1 | P2 | | |
| 1 | 1660298 | 3723817 | SRIDHAR | 36 | 118.5 | 154.5 | 3B_OTH |
| 2 | 1614448 | 3732799 | GIRISHA M | 27.5 | 122.625 | 150.125 | 2A_RUR |
| 3 | 1654592 | 3724741 | CHANDRASHEKAR | 36.5 | 107.625 | 144.125 | SC_OTH |

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಮತ್ತು ಅಧ್ಯಕ್ಷರು,
ಪಿ.ಎಸ್.ಐ (ಸಿವಿಲ್) (ಹೈ-ಕ) ನೇಮಕಾತಿ ಸಮಿತಿ,
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

ಪ್ರತಿಯನ್ನು: ಕಛೇರಿ ಕಡತ ಮತ್ತು ನೋಟಿಸ್ ಬೋರ್ಡ್

**ಪ್ರತಿಯನ್ನು ಅಭಿನಂದನೆಗಳೊಂದಿಗೆ ಮಾಹಿತಿಗಾಗಿ :** –

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.